ಗೆಳೆಯರ ಭೇಟಿಯಾದರೆ ಮತ್ತೆ ರಾಜಕೀಯಕ್ಕೆ ಧುಮುಕಲು ಒತ್ತಾಯಿಸಬಹುದು. ಹಳೆಯ ಲಾಡ್ಜ್ ಈಗ ಜನವಾಸವಿಲ್ಲದೆ ಸೋರುತ್ತಿದೆ. ಮೇಷ್ಟ್ರುಗಳೆಲ್ಲಾ ಕೆಲಸ ಬಿಟ್ಟು ಹೋದರು. ಕೆಲವರು ವರ್ಗಾವಣೆ ತೆಗೆದುಕೊಂಡು ಹೋದರು.

ವಾಚನಾಲಯದಲ್ಲಿ ಅಂದಿನಂತೆ ಒಟ್ಟಾಗಿ ಕುಳಿತು ಚರ್ಚೆ ಮಾಡುವುದಿಲ್ಲ. ಅರ್ಧವೃತ್ತಾಕೃತಿಯಲ್ಲಿ ಹೆಸರನ್ನು ಕೆತ್ತಿದ ಹಳೆಯ ಮರದ ಹಲಗೆಯ ಬದಲಿಗೆ ಉದ್ದ ಮತ್ತು ಅಗಲವಾಗಿರುವ ತವರದ ಬೋರ್ಡಿದೆ. ಸೆಲ್ಫ್‌ಗಳಲ್ಲಿ ಪುಸ್ತಕಗಳನ್ನು ಬಲವಂತವಾಗಿ ಇರಿಸಿದಂತಿದ್ದರೂ ಓದುಗರಿಲ್ಲದೆ ಸೊರಗುತ್ತಿವೆ. ಟಿ.ವಿ., ರೂಮು ಸಂಜೆ ಹೊತ್ತು ಜೀವ ತಳೆಯುತ್ತದೆ. ಟಿ.ವಿ. ಇಲ್ಲದ ಮನೆಯವರು ಅಲ್ಲಿಗೆ ಹೋಗಿ ಕುಳಿತುಕೊಳ್ಳುತ್ತಾರೆ.

ಬನ ದೇಗುಲವಾಗಿದೆ. ಆದರೂ ತೆಯ್ಯಂ ಕಟ್ಟಿ ಆಡುವ ಸಂಪ್ರದಾಯವನ್ನು ಕೈಬಿಟ್ಟಿಲ್ಲ. ಗುಳಿಗ ತೆಯ್ಯಂ ಜೊತೆಗೆ ಕುಟ್ಟಿಚಾತ್ತನ್, ಕಂಠಕರ್ಣನ್, ವಸೂರಿಮಾಲ, ಚಾಮುಂಡಿ ತೆಯ್ಯಂಗಳು ರಂಗಪ್ರವೇಶ ಮಾಡಿವೆ. ರಾತ್ರೆ ಏಳು ಗಂಟೆಗೆ ಪ್ರಾರಂಭವಾಗುವ ತೆಯ್ಯಂ ವೇಷಗಳ ಕುಣಿದಾಟ, ನಸುಕಿನ ನಾಲ್ಕೂವರೆಯವರೆಗೆ ನಡೆಯುತ್ತದೆ. ಅದರ ನಂತರ ಸಿಡಿಮದ್ದುಗಳನ್ನು ಸಿಡಿಸುವ ಭರಾಟೆ, ಪೂರ್ವದ ತಂಡ ಮತ್ತು ಪಶ್ಚಿಮ ತಂಡ ಎಂಬ ಎರಡು ಗುಂಪುಗಳು ಸ್ಪರ್ಧಿಸಿ ಸಿಡಿಮದ್ದನ್ನು ಸಿಡಿಸುತ್ತಾರೆ. ಮೊದಲ ದಿನ ಪೂರ್ವದಿಂದಲೂ, ಪಶ್ಚಿಮದಿಂದಲೂ ಘೋಷಯಾತ್ರೆ ಬರುತ್ತವೆ. ವರ್ಣರಂಜಿತವಾದ ಈ ಮೆರವಣಿಗೆಯಲ್ಲಿ ಅವರವರ ಸಾಮರ್ಥ್ಯದ ಪ್ರದರ್ಶನವಿರುತ್ತದೆ.

ಇವೆಲ್ಲವನ್ನೂ ಹೇಳಿದ್ದು ಸುಮಿತ್ರಾ. ನಾನು ಕಳೆದುಕೊಂಡ ಹದಿಮೂರು ವರ್ಷಗಳು ಅವಳು ನನಗೆ ಸ್ವಲ್ಪ ಸ್ವಲ್ಪವಾಗಿ ಅನುಭವಿಸುವಂತೆ ಮಾಡಿದಳು. ಆದರೆ ಇದುವರೆಗೆ ಇವಳು ಉತ್ಸವಕ್ಕೆ ಹೋಗಿಲ್ಲ. ಈ ಸಲ ಅತ್ತೆ ಮತ್ತು ಸುಮಿತ್ರಾಳನ್ನು ಕರೆದುಕೊಂಡು ಊರಿನವರ ಮುಂದೆ ಮೆರೆಯಬೇಕು. ನಾನು ಹಿಂತಿರುಗಿದ ವಿಷಯ ಹಾಗಾದರೂ ಆಲಿಂಬ್ರದವರು ಅರಿಯಲಿ.

ಅತ್ತೆ ಮೂರು ಮಕ್ಕಳಿಗೂ ಪತ್ರ ಬರೆದರು. ಸುಮಿತ್ರಾ ಬದುಕಿಗೆ ಮರಳಿದಾಗ ಅತ್ತೆಗಾದ ಸಂತೋಷವನ್ನು ಉಳಿದ ಮೂರು ಮಕ್ಕಳಿಗೂ ಹಂಚಿಕೊಂಡರು. ಕೂಡಲೇ ನಾವು ಮದುವೆಯಾಗುತ್ತೇವೆಂದೂ ಎಲ್ಲರೂ ಅದಕ್ಕೆ ಸಹಕಾರ ನೀಡಬೇಕೆಂದು ಅತ್ತೆ ಬರೆದು ತಿಳಿಸಿದರು.

ಸುಮಿತ್ರಾ ಬಿಳಿ ವಸ್ತ್ರಧಾರಣೆಯನ್ನು ತ್ಯಜಿಸಲಿಲ್ಲ. ಏಕೆಂದು ಕೇಳಿದಾಗ ಮದುವೆಯಾಗಲೆಂದು ಉತ್ತರಿಸಿದ್ದಳು. ನಾನು ಒತ್ತಾಯಿಸಲಿಲ್ಲ.

ಮನೆಯ ಹಿಂದಿನಿಂದ ಪುರಳಿಮಲೆ ನನ್ನನ್ನು ಕೈಸನ್ನೆ ಮಾಡಿ ಕರೆಯುವಂತಿತ್ತು. ಹಿಂದೆ ನಾವು ಆಗಾಗ ಪಿಕ್‌ನಿಕ್‌ಗೆ ಹೋಗುತ್ತಿದ್ದ ಪೂವತ್ತಾರ್ ಮಡು, ಕೊಂಜನ್ ಗುಂಡಿಗಳು ನೆನಪಿನಲ್ಲಿ ಸದಾ ಪುಳಕವನ್ನುಂಟು ಮಾಡುತ್ತಿದ್ದವು. ಕತ್ತಿನತನಕ ನೀರಿನಲ್ಲಿ ಕೋಣಗಳಂತೆ ಕೊಂಜನ್‌ಗುಂಡಿಯಲ್ಲಿ ಮುಳುಗೇಳುವಾಗ ಕಪ್ಪು ಸಿಗಡಿ ಮೀನುಗಳು ಮೂತಿ ಮುಟ್ಟಿಸಿ ಓಡಿ ಹೋಗುತ್ತಿದ್ದವು. ಈ ಮಲೆಯ ಮೇಲಿನ ಗುಂಡಿಯಲ್ಲಿ ಸಿಗಡಿ ಹೇಗೆ ಬಂದು ಸೇರಿತೆಂದು ಅಚ್ಚರಿಪಟ್ಟದ್ದುಂಟು.

ಸುಮಿತ್ರಾಳನ್ನು ಕರೆದುಕೊಂಡು ನಾನು ಬೆಳಿಗ್ಗೆ ನಾನು ಮಲೆಯ ಮೇಲಕ್ಕೆ ಹೋದೆ. ಹಿಂದಿನಂತೆ ಕುಣಿದು ಕುಪ್ಪಳಿಸಿ ನಡೆಯಲು ಸಾಧ್ಯವಾಗಲಿಲ್ಲ. ಅನೇಕ ಕಡೆ ಸುಮಿತ್ರಾಳ ಕೈ ಹಿಡಿದು ಮಲೆ ಹತ್ತಿದೆ. ಆರಂಭದಲ್ಲಿ ದಾರಿ ಬದಲಾಗಿದ್ದರೂ ಸ್ವಲ್ಪ ದೂರ ಹೋದ ನಂತರ ಹಳೆಯದಂತಿತ್ತು. ದಾರಿಯಲ್ಲಿ ಯಾರೂ ಬರುತ್ತಿಲ್ಲವೆಂದು ಖಚಿತವಾದಾಗ ನಾನು ಸುಮಿತ್ರಾಳನ್ನು ಗಟ್ಟಿಯಾಗಿ ಅಪ್ಪಿಕೊಂಡುಬಿಟ್ಟೆ. ಹಿಂದೆಂದೂ ಸಾರ್ವಜನಿಕ ರಸ್ತೆಯಲ್ಲಿ ಅವಳನ್ನು ಹೇಗೆ ಸ್ಪರ್ಶಿಸಿರಲಿಲ್ಲ. ಸಿಕ್ಕದೇ ಇರುವುದನ್ನಲ್ಲವೆ ಕದ್ದೊಯ್ಯಬೇಕಾಗಿದ್ದು. ಈಗಲೂ ಸುಮಿತ್ರಾ ನನ್ನವಳೇ ಆದರೂ ಏಕೋ ಭಾವತೀವ್ರತೆಯನ್ನು ಅಡಗಿಸಿಡಲಾಗಲಿಲ್ಲ. ಮೂರು ಸಲ ಅವಳು ಕೊಸರಿಕೊಂಡು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ ತಡೆಯಲಿಲ್ಲ.

ಆನೆಗಳು ಮರ ಮುರಿಯುವ ಬಂಡೆಯಲ್ಲಿ ಕುಳಿತು ಪುನಃ ಕಥೆಗಳನ್ನು ಮೆಲುಕು ಹಾಕಿದೆ. ಊರ್ಮಿಳಾ ಹೋದನಂತರವಷ್ಟೆ ಸುಮಿತ್ರಾಳ ಒಂಟಿತನ ಪ್ರಾರಂಭ. ಅಪ್ಪ ತೀರಿಕೊಂಡಾಗ ಅದು ಇಮ್ಮಡಿಯಾಯಿತು. ಪ್ರತಿದಿನ ಕಳೆಯುತ್ತಿದ್ದಂತೆ ಸುಮಿತ್ರಾ ಮತ್ತಷ್ಟು ಹತ್ತಿರವಾಗತೊಡಗಿದಳು. ಅನಗತ್ಯ ನೋಟಗಳನ್ನು ಟೀಕೆಗಳನ್ನು ಎದುರಿಸುವುದಕ್ಕೋಸ್ಕರ ಅವಳು ಶ್ವೇತವಸ್ತ್ರ, ಮೌನ, ನಿಸ್ಸಂಗತೆ ಮುಖ ಮುದ್ರೆಯನ್ನಾಗಿಸಿದ್ದು. ಮೊದಮೊದಲು ಯುವಕರು ಕುಡಿಯಲು ನೀರು ಕೇಳುತ್ತಾ, ಬೀಡಿಗೆ ಬೆಂಕಿ ಕೇಳುತ್ತಾ ಬರುತ್ತಿದ್ದರು. ಮದುವೆಯಾಗುವ ಆಸೆಯಿಂದಲೂ ಕೆಲವರು ಮನೆಗೆ ಬಂದರು. ನಿರ್ಲಿಪ್ತವಾದ ಉತ್ತರ ಅವರ ಉತ್ಸಾಹವನ್ನು ಭಂಗಗೊಳಿಸಿತು. ಅಮ್ಮನು ತನ್ನನ್ನು ಬಿಟ್ಟುಹೋದರೆ ಬದುಕನ್ನೇ ಕೊನೆಗಾಣಿಸುವ ಚಿಂತನೆಯಲ್ಲಿದ್ದಳು ಸುಮಿತ್ರಾ.

ಕಥೆಯ ಅಂತ್ಯದಲ್ಲಿ ನಾನು ಅವಳನ್ನು ನನ್ನ ಕರವಲಯದಲ್ಲಿ ರಕ್ಷಿಸಿದೆ. ಅವಳಿಗೋಸ್ಕರ ತುಡಿಯುವ ನನ್ನ ಹೃದಯದಲ್ಲಿ ಸೇರಿಸಿದೆ. ನನ್ನ ಎದೆಯ ಮೇಲೆಲ್ಲಾ ಕಣ್ಣೀರು ಸುರಿಸಿ ಹೆಚ್ಚು ಹೊತ್ತು ಬಿಕ್ಕಿ ಬಿಕ್ಕಿ ಅತ್ತಳು.

## ಅಧ್ಯಾಯ–17

ಸರ್ಕಾರದ ಪುನರ್ವಸತಿ ಕೇಂದ್ರಕ್ಕೆ ನಾನು ಕರೆ ಮಾಡಿದೆ. ಡಿ.ವೈ.ಎಸ್.ಪಿ. ರಜೆಯಲ್ಲಿದ್ದರು. ಹೆಸರು ಮತ್ತು ಮನವಿಯ ನಂಬರನ್ನು ಕೊಟ್ಟಾಗ ರಾಯಭಾರಿ ಕಚೇರಿಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆಂದು, ಯುದ್ಧ ನಿಂತ ಕೂಡಲೇ ನಷ್ಟ ಪರಿಹಾರ ಅಥವಾ ಹೊಸದೊಂದು ಕೆಲಸ ನೀಡುವ ಪದ್ಧತಿ ಪರಿಗಣಿಸಲಾಗುವುದೆಂದು ತಿಳಿಯಿತು. ತಕ್ಷಣವೇ ಪಾಸ್‌ಪೋರ್ಟ್, ಸರ್ಟಿಫಿಕೇಟುಗಳನ್ನು ತೆಗೆದುಕೊಂಡು ಹೋಗಬೇಕು. ಮತ್ತೊಂದು ಪರಿಶೀಲನೆ ಬಾಕಿಯಿದೆ.

ದೇವಸ್ಥಾನದ ಉತ್ಸವಕ್ಕೆ ಇನ್ನಿರುವುದು ಎರಡೇ ದಿನಗಳು. ಬನದ ಸುತ್ತಲೂ ಸಂತೆಮಾಳ, ಸ್ಟಾಲ್‌ಗಳು ಮೇಲೇಳುತ್ತಿವೆ. ಉತ್ಸವ ಮುಗಿದ ನಂತರ ಹೋದರೆ ಸಾಲದೇ ಎಂದು ಅತ್ತೆ ಮತ್ತು ಸುಮಿತ್ರಾ ಕೇಳಿದರು.

'ಸಾಲದು, ಉತ್ಸವದ ದಿನವೇ ತಿರುಗಿ ಬರಲು ಪ್ರಯತ್ನಿಸುತ್ತೇನೆ. ಮೆರವಣಿಗೆ, ಘೋಷಯಾತ್ರೆಗಳು ಕಳೆದರೂ ಪರವಾಗಿಲ್ಲ. ನಾನು ಬರಲು ಪ್ರಯತ್ನಿಸುತ್ತೇನೆ' ಎಂದು ಹೇಳಿ ನಾನು ಹೊರಟೆ. ಎರಡು ದಿನಗಳಿಗೆ ಬೇಕಾದ ಬಟ್ಟೆಬರೆಗಳನ್ನು ಸರ್ಟಿಫಿಕೇಟುಗಳನ್ನು ಒಂದಷ್ಟು ಹಣವನ್ನು ತೆಗೆದು ಏರ್‌ಬ್ಯಾಗಿಗೆ ತುರುಕಿ ಮನೆಯಿಂದ ಹೊರಬಿದ್ದೆ.

ರಾಜಧಾನಿಗಿರುವ ರೈಲು ತುಂಬಾ ಜನಸಂದಣಿ. ಒಬ್ಬ ಪೋರ್ಟರ್, ನನಗೆ ಟಿ.ಟಿ.ಇ.ಯನ್ನು ಪರಿಚಯಿಸಿದ. ಫಸ್ಟ್‌ಕ್ಲಾಸ್ ಮಾತ್ರ ಖಾಲಿಯಿತ್ತು. ದುಪ್ಪಟ್ಟು ಚಾರ್ಜು ಮತ್ತು ಲಂಚವನ್ನು ಕೊಟ್ಟು ಸೀಟು ಪಡೆದೆ. ಅದರಿಂದ ಒಂದು ಒಳ್ಳೆಯ ಮೊತ್ತ ಕೈಬಿಟ್ಟು ಹೋಯಿತು. ಪರವಾಗಿಲ್ಲ, ನೆಮ್ಮದಿಯಾಗಿ ಪ್ರಯಾಣಿಸಬಹುದಲ್ಲ.

ಅಚ್ಚರಿಯೆಂಬಂತೆ ಜಯರಾಮ ನಾನು ಪ್ರಯಾಣಿಸುವ ರೈಲಿನಲ್ಲಿದ್ದ. ಕಂಡಕೂಡಲೇ ಪರಿಚಯ ನವೀಕರಣಗೊಳ್ಳಲು ತಡವಾಗಲಿಲ್ಲ. ಪ್ರಯಾಣದ ಬೇಸರ ಕಳೆಯಲು ಜಯರಾಮ ಸಹಾಯಮಾಡಿದ. ಆತ ಈಗ ಪೂರ್ಣ ಪ್ರಮಾಣದ ರಾಜಕಾರಣಿ. ರಾಜಕೀಯದಿಂದ ಒಂದಷ್ಟು ಸಂಪಾದನೆಯೂ ಆಗಿದೆ. ಒಂದು ಫೋಟೋ ಸ್ಟುಡಿಯೋ, ರಾಜಧಾನಿಗೆ ಹೋದರೆ ಉಳಿಯಲು ಸಿಂಗಲ್ ಬೆಡ್ ರೂಂ ಫ್ಲಾಟ್, ಶ್ರೀಮಂತನ ಒಬ್ಬಳೇ ಒಬ್ಬಳು ಮಗಳು ಹೆಂಡತಿ, ಇಬ್ಬರು ಮಕ್ಕಳು... ಮೊನ್ನೆ ಮೊನ್ನೆ ಭೇಟಿಯಾಗಿದ್ದೆವು ಎಂಬಂತಿತ್ತು ಆತನ ಮಾತಿನ ಮೋಡಿ. ನನ್ನ ಕಥೆಯನ್ನು ಅವನಿಗೆ ಸಂಕ್ಷಿಪ್ತವಾಗಿ ಹೇಳಿದೆ.

ಎಲ್ಲವನ್ನೂ ವಿವರವಾಗಿ ಹೇಳಿದ್ದಿದ್ದರೆ, ನಿಮ್ಮಲ್ಲಿ ಇಷ್ಟೊಂದು ವಿಶದವಾಗಿ ಹೇಳಲು ಸಾಧ್ಯವಾಗುತ್ತಿರಲಿಲ್ಲವೇನೋ, ಆತ್ಮಕಥೆಯಾಗಿದ್ದರೂ ಒಂದು ಸುತ್ತು ಹೇಳಿದರೆ ಮಾತ್ರ ಕಥೆಯಾಗುತ್ತದೆ. ಪುನಃ ಹೇಳುವಾಗ ಅದರ ಮೂಲ ಸೊಗಡು ಕಳೆದುಹೋಗುತ್ತದೆ.

ಜಯರಾಮ ಈಗ ಬುದ್ಧಿಹೇಳಲು ಪ್ರಾರಂಭಿಸುತ್ತಾನೆಂದುಕೊಂಡೆ. ರಾಜಕೀಯದಲ್ಲಿ ನಂಬಿಕೆಯೇ ಇಲ್ಲದ ಆತ ಈಗ ಪೂರ್ಣ ಪ್ರಮಾಣದ ರಾಜಕೀಯ ಪುಡಾರಿಯಾಗಿದ್ದಾನೆ. ಆದ್ದರಿಂದ ನಾನೂ ರಾಜಕೀಯಕ್ಕಿಳಿಯಲು ಹೇಳಬಹುದು. ಎಲ್ಲಾ ರಾಜಕೀಯ ಪಕ್ಷಗಳಿಂದಲೂ, ವ್ಯಕ್ತಿಗಳಿಂದಲೂ ದೂರವಾಗಿರುವ ನಾನು ಈಗ ಜೀವನ ನಿರ್ವಹಣೆಯತ್ತ ಗಮನಿಸುತ್ತಿದ್ದೇನೆಂದು ಇವನಿಗೇನು ಗೊತ್ತು?

'ಮಚ್ಚಾ, ನಿನಗೆ ಪೊಲಿಟಿಕ್ಸ್ ಆಗಲ್ಲ. ಪೊಲಿಟಿಕ್ಸ್‌ಗೆ ಬೇಕಾಗಿರೋದು ಮೂರು ಗುಣಗಳು. ಮೊದಲನೆಯದು ಏನು ಬೇಕಾದರೂ ಕೂಗಿ ಹೇಳುವ ಧೈರ್ಯ. ಆಗ ಮಾತ್ರ ಜನಕ್ಕೆ ನಿನ್ನ ಮೇಲೆ ಪ್ರೀತಿ ಗೌರವ ಹುಟ್ಟೋದು. ಎರಡನೆಯದು ನಯ ಮತ್ತು ತಂತ್ರಗಾರಿಕೆ. ರಾಜಕೀಯದಲ್ಲಿ ಗಟ್ಟಿಯಾಗಿ ತಳವೂರಬೇಕೆಂದರೆ ಇವು ಬೇಕು. ಮೂರನೆಯದು ಗಟ್ಟಿ ಚರ್ಮ. ದೊಡ್ಡ ದೊಡ್ಡ